ಲೋಟ ಕಾಫಿ ಕುಡಿಯೋಣ ಎಂದು ಪಕ್ಕದ ಕಾಮತರ ಹೋಟೆಲಿಗೆ ಹೋಗಿ ಕುಳಿತೆ.

ಕಾಫಿ ಮಾಡಿಕೊಟ್ಟ ಕಾಮತರು ತಮಗೂ ಒಂದು ಗ್ಲಾಸಿನಲ್ಲಿ ಅರ್ಧ ಕಾಫಿ ಹಾಕಿಕೊಂಡು ಬಂದು ನನ್ನೆದುರಿಗೆ ಕುಳಿತರು. "ಕೊನೆಗೂ ಜಯಲಲಿತಾ ಸತ್ತ ಸುದ್ದಿಯನ್ನು ಶಶಿಕಲಾ ಹೊರಗೆಹಾಕಿದಳಲ್ಲ" ಎಂದರು ನನ್ನನ್ನು ಮಾತಿಗೆ ಎಳೆಯಲು.

ನನಗೆ ಅದರಲ್ಲಿ ಎಳ್ಳಷ್ಟೂ ಆಸಕ್ತಿ ಇಲ್ಲದಿದ್ದರೂ ವಾರ್ತಾಪತ್ರಿಕೆಗಳು, ಟೀವಿಯವರು, ಜನಸಾಮಾನ್ಯರು, ಬುದ್ಧಿಜೀವಿಗಳು ಎಲ್ಲರೂ ಅದೇ ಸುದ್ದಿಯನ್ನು ಚರ್ಚಿಸುತ್ತಿದ್ದರು. ಹಿಂದೊಮ್ಮೆ ಅವಳು ಜೈಲಿಗೆ ಹೋದಾಗ ಅವಳ ಜೀವನಚರಿತ್ರೆಯನ್ನು ಜನರೆಲ್ಲ ಓದಬೇಕಾಗಿ

